ಎರಡು ವರ್ಷ ಆಯ್ತು. ಯಾರೂ ನನ್ನನ್ನು ತಂಗಿ ಅಂತ ಕರೀಲಿಲ್ಲ. ನಿಮ್ಮನ್ನು ತಪ್ಪಾಗಿ ತಿಳಕೊಂಡು ಕಂಪ್ಲೇಂಟ್ ಮಾಡಿದ್ದೆ. ಸಾರೀ...' ಅನ್ನುತ್ತ ಎರಡೂ ಕೈಗಳಿಂದ ಸಣ್ಣಗೆ ಕೆನ್ನೆ ತಟ್ಟಿಕೊಂಡಳು. ತೇಜಸ್ವಿ ನಕ್ಕ.

ತೇಜಸ್ವಿ ಚುಡಾಯಿಸಿದ ಅಂತ ಕಂಪ್ಲೇಂಟ್ ಕೊಟ್ಟು ಆ ಮೇಲೆ ಹಿಂದಕ್ಕೆ ತೆಗೆದುಕೊಂಡದ್ದನ್ನು ಅವಳೇ ಆಫೀಸಿನ ಎಲ್ಲರಿಗೂ ಹೇಳಿದಳು. ತೇಜಸ್ವಿ ನನ್ನನ್ನು ಬಂಗಾರು ಚೆಲ್ಲಿ ಅಂತ ಕರೆದ ಅಂತಲೂ ಹೇಳಿದಳು.

★★★

ಎರಡನೇ ಶಿಫ್ಟ್ ಶುರುವಾಗೋದು ಮೂರು ಗಂಟೆಗಾದರೂ ಆವತ್ತು ಹನ್ನೊಂದು ಗಂಟೆ ಹೊತ್ತಿಗೆ ತೇಜಸ್ವಿ ಮತ್ತು ಅಜಯ್ ಇಬ್ಬರೂ ಆಫೀಸಿಗೆ ಬಂದರು. ಮ್ಯೂಸಿಕ್ ಕ್ರಿಟಿಕ್ ಉಷಾ ಅನಂತರಾಂ ಆಫೀಸಿನಲ್ಲಿ ಇರೋದನ್ನು ತೇಜಸ್ವಿ ಗಮನಿಸಿದ. ಪ್ರತಿ ಶುಕ್ರವಾರ ಆಫೀಸಿಗೇ ಬಂದು ಮನೆಯಲ್ಲೇ ಬರೆದುಕೊಂಡು ಬಂದ ಮ್ಯೂಸಿಕ್ ಮತ್ತು ಡ್ಯಾನ್ಸ್‌ಗೆ ಸಂಬಂಧಿಸಿದ ವಿಮರ್ಶೆಯ ಲೇಖನಗಳನ್ನು ಕೊಟ್ಟು ಹೋಗುವುದು ಅವರ ಅಭ್ಯಾಸ.

ತೇಜಸ್ವಿ ಅವರ ಬಳಿ ಹೋಗಿ ಕೈಕಟ್ಟಿ ನಿಂತು, 'ಮೇಡಂ, ಹಿಂದೂಸ್ಥಾನಿ ಮತ್ತು ಕರ್ನಾಟಕ ಸಂಗೀತ ಎರಡನ್ನೂ ಒಟ್ಟಿಗೆ ಕಲಿಸೋರು ಯಾರಾದರೂ ನಿಮಗೆ ಗೊತ್ತಿದ್ದರೆ ಹೇಳಿ... ನಾನು ಮ್ಯೂಸಿಕ್ ಕಲಿಯಬೇಕು ಅಂತ ಇದೀನಿ' ಅಂದ.

ಲೇಖನ ಓದುತ್ತಿದ್ದ ಉಷಾ ತಲೆ ಎತ್ತಿ ತೇಜಸ್ವಿಯನ್ನು ಆಪಾದಮಸ್ತಕ ನೋಡಿದರು. ಎರಡನ್ನೂ ಒಟ್ಟಿಗೆ ಕಲಿಸೋರು ಯಾರೂ ಇಲ್ಲ. ಮೊದಲು ಯಾವುದಾದರೂ ಒಂದನ್ನು ಕಲಿ ಅಂತ ಹೇಳಿ, ಬ್ಯಾಗಿನಿಂದ ಸೀಡಿಯೊಂದನ್ನು ತೆಗೆದು ಕೊಡುತ್ತ, 'ಇದು ಹೊಸದಾಗಿ ಬಂದಿರೊ ಮ್ಯೂಸಿಕ್ ಆಲ್ಬಂ. ಮೊದಲು ಇದನ್ನು ಕೇಳು. ಮುಂದಿನ ಸಂಡೆ ಎಡಿಷನ್‌ನಲ್ಲಿ ಇದರ ಬಗ್ಗೆ ನನ್ನ ರಿವ್ಯೂ ಇರುತ್ತೆ ಓದು. ನೆಕ್ಸ್ಟ್ ವೀಕ್ ಬರ್ತೀನಲ್ಲ ಆಗ ಮಾತಾಡೋಣ... ಯಾವೂರು ನಿಂದು' ಅಂತ ಕೇಳಿ, 'ಈಗ ನಂಗೆ ಟೈಂ ಇಲ್ಲ' ಅನ್ನುತ್ತ ಓದುವುದನ್ನು ಮುಂದುವರಿಸಿದರು.

ಶಿಫ್ಟ್ ಶುರುವಾಗೋಕೆ ಇನ್ನೂ ಸಮಯ ಇತ್ತು. ತೇಜಸ್ವಿ, 'ದೇವ ಬಂದಾ ನಮ್ಮ ಸ್ವಾಮಿ ಬಂದಾ' ಅಂತ ಸಣ್ಣಗೆ ಗುನುಗುತ್ತಿದ್ದ. ಅವನ ಅಕ್ಕ ಪಕ್ಕ ಕೂತಿದ್ದವರು ಅವನ ಹಾಡುವ ಉಮೇದನ್ನು ಗಮನಿಸಿದರು.

'ಪರವಾಗಿಲ್ಲ ತೇಜಸ್ವಿ, ನಿಮ್ಮ ವಾಯ್ಸ್ ಚೆನ್ನಾಗಿದೆ. ನೀವು ಸಂಗೀತ ಕಲಿಯಬಹುದು' ಅಂತ ಅಂದರು. ಅವರ ಮಾತಿನಿಂದ ತೇಜಸ್ವಿ ಉತ್ತೇಜಿತನಾದ. 'ಇವತ್ತು ಉಷಾ ಮೇಡಂ ಒಂದು ಮ್ಯೂಸಿಕ್ ಸೀಡಿ ಕೊಟ್ಟಿದ್ದಾರೆ. ಮುಂದಿನ ವಾರ ಸಂಗೀತದ ಗುರುಗಳನ್ನು ಹುಡುಕಿ ಕೊಡ್ತಿನಿ ಅಂತ ಹೇಳಿದ್ದಾರೆ' ಅನ್ನುತ್ತ ಮತ್ತೆ 'ದೇವ ಬಂದಾ ನಮ್ಮ ಸ್ವಾಮಿ ಬಂದಾ...' ಅಂತ ಗುನುಗಾಟ ಮುಂದುವರಿಸಿದ.

'ಉರಗ ಶಯನ ಬಂದ, ಗರುಡ ಗಮನ ಬಂದಾ...' ಅನ್ನುವಷ್ಟರಲ್ಲಿ ಗ್ರಾಫಿಕ್ ಆರ್ಟಿಸ್ಟ್ ರಂಗನಾಥ್ ಮತ್ತು ಆ್ಯಡ್ ಸೆಕ್ಷನ್‌ನ ಗರುಡಾಚಾರ್ ಇಬ್ಬರೂ ಒಟ್ಟಿಗೆ ಬಂದರು. 'ಏನ್ ಟೈಮಿಂಗ್‌ರೀ ತೇಜಸ್ವಿ ನಿಮ್ದು' ಅನ್ನುತ್ತ ಎಲ್ಲರೂ ನಕ್ಕರು. ತೇಜಸ್ವಿ ಹಾಡುವುದನ್ನು ನಿಲ್ಲಿಸಿದ.

ಅದೇ ಸಮಯಕ್ಕೆ ಬಂದ ಅಜಯ್, ತೇಜಸ್ವಿ ಕಡೆ ನೋಡುತ್ತ, 'ಏಮಿ ಭಾವಾ ನುವ್ವು ಕ್ಯಾಂಟೀನಿಕಿ ರಾ ಲೇದು?' ಅಂತ ಕೇಳಿದ. ಅವನ ಮಾತಿಗೆ ಆಫೀಸಿನಲ್ಲಿದ್ದವರೆಲ್ಲ ತಿರುಗಿ ನೋಡುವಂತೆ ಜೋರಾಗಿ ನಕ್ಕರು.

'ಕೇಳ್ರಯ್ಯ, ಭಾವ, ಬಾಮೈದರ ಮಾತಿನ ವರಸೆಯನ್ನ. ಎಷ್ಟು ಚೆನ್ನಾಗಿ ಮಾತಾಡಿಕೊಳ್ತಿದ್ದಾರೆ. ಸಹ ಮನುಷ್ಯರ ಜತೆ ಸಂಬಂಧ ಸೂಚಕ ಪದಗಳನ್ನು ಬಳಸಿ ಮಾತಾಡೋದನ್ನು ಇವರನ್ನು ನೋಡಿ